# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಜಗಳೂರು

## ಸಿ ಸಿ ನಂಃ607/2019

## ಚಾಸಾ-2/ಪ್ರಾಸಾ-2

**ಪ್ರಮಾಣ ವಚನ ಭೋಧಿಸಲಾಯಿತು.** **ದಿನಾಂಕಃ02.04.2025**

| | | |
|---|---|---|
| ಹೆಸರು | : | ಮಿನಾಕ್ಷಮ್ಮ ಕೋಂ ವಿಷ್ಣು |
| ವಯಸ್ಸು | : | **64** ವರ್ಷ |
| ಉದ್ಯೋಗ | : | ನಿವೃತ್ತ ಸ್ಟಾಪ್ ನರ್ಸ್ |
| ವಿಳಾಸ | : | ಜಗಳೂರು ಟೌನ್, ಜಗಳೂರು ತಾಲೂಕು |

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ನಾನು ಜಗಳೂರು ಸರ್ಕಾರಿ ಆಸ್ಪತ್ರೆಯಲ್ಲಿ 1986 ರಿಂದ ಮೇ 2019 ರವರೆಗೆ ಸ್ಟಾಪ್ ನರ್ಸ್ ಆಗಿ ಕರ್ತವ್ಯ ಮಾಡಿರುತ್ತೇನೆ. ಚಾಸಾ1 ರವರು ನನಗೆ ಪರಿಚಯ ಇರುತ್ತಾರೆ. ಅವರು ವೈದ್ಯರಾಗಿ ಕರ್ತವ್ಯ ಮಾಡಿರುತ್ತಾರೆ. ಚಾಸಾ3, 4 ರವರು ಜಗಳೂರು ಸರ್ಕಾರಿ ಆಸ್ಪತ್ರೆಯ ಸಿಬ್ಬಂದಿಯಾಗಿ ಕರ್ತವ್ಯ ಮಾಡಿರುತ್ತಾರೆ. ಚಾಸಾ8 ರವರು ಪರಿಚಯ ಇರುತ್ತಾರೆ.

ಆರೋಪಿ ನಂಃ1 ಮತ್ತು 2 ನನಗೆ ಪರಿಚಯ ಇರುತ್ತಾರೆ. ನನಗೆ ದಿಃ09.01.2019 ರಂದು ರಾತ್ರಿ 09.30 ಗಂಟೆಗೆ ಚಾಸಾ1 ರವರು ಫೋನ್ ಮಾಡಿ ಜಗಳೂರು ಸರ್ಕಾರಿ ಆಸ್ಪತ್ರೆಗೆ ಬರಲು ತಿಳಿಸಿರುತ್ತಾರೆ. ನಾನು 05 ನಿಮಿಷದ ನಂತರ ಮನೆಯಿಂದ ಆಸ್ಪತ್ರೆಗೆ ಹೋಗಿರುತ್ತೇನೆ. ಆ ಸಮಯಕ್ಕೆ ಗಲಾಟೆ ಮುಗಿದಿರುತ್ತದೆ ಎಂದು ಚಾಸಾ1 ರವರು ತಿಳಿಸಿರುತ್ತಾರೆ. ನನಗೆ ಚಾಸಾ1 ರವರು ಆಸ್ಪತ್ರೆಯಲ್ಲಿ ಗಲಾಟೆ ನಡೆದಿರುತ್ತದೆ ಸಹಿ ಹಾಕು ಎಂದು ತಿಳಿಸಿದ್ದು ನಾನು ಸಹಿ ಮಾಡಿರುತ್ತೇನೆ. ನಾನು ಗಲಾಟೆ ನಡೆದಿರುವುದನ್ನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ.

**(**ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸದರಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಸೂಕ್ತ ಕಾರಣಗಳನ್ನು ನೀಡಿದ ಮೇರೆಗೆ ಪಾಟೀ ಸವಾಲಿಗೆ ಅವಕಾಶ ನೀಡಲಾಯಿತು**).**

**<u>ಪಾಟೀ ಸವಾಲುಃ</u>** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ದಿಃ09.01.2019 ರಂದು ನಾನು ಜಗಳೂರು ಸರ್ಕಾರಿ ಆಸ್ಪತ್ರೆ ಕೆಲಸ ಮಾಡುತ್ತಿದ್ದ ಕಾಲಕ್ಕೆ ಚಾಸಾ1 ರವರು ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಸದರಿ ದಿನ ಆರೋಪಿಗಳು ಕುಡಿದುಕೊಂಡು ಬಂದು ಗಲಾಟೆ ಮಾಡಿರುತ್ತಾರೆ ಎಂದರೆ ನಾನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ. ಆರೋಪಿ ನಂಃ1 ರವರು ತನ್ನ ಮಗನಿಗೆ ಚಾಸಾ1 ರವರಿಂದ ಚಿಕಿತ್ಸೆ ಪಡೆದುಕೊಂಡು ತಮ್ಮ ಮಗನಿಗೆ ಯಾವುದೇ ತೊಂದರೆ ಆಗದಿದ್ದರೂ ಸಹ ಸುಖಾಸುಮ್ಮನೆ ತೊಂದರೆ ಆಗಿದೆ ಎಂದು ಚಾಸಾ1 ರವರೊಡನೆ ಆರೋಪಿಗಳು ಸೇರಿಕೊಂಡು ಕರ್ತವ್ಯ ನಿರತ ವೈದರಿಗೂ ಹಾಗೂ ನನಗೂ ಮತ್ತು ಇತರೆ ಸಿಬ್ಬಂದಿಗಳಿಗೆ ಏಕವಚನಗಳಲ್ಲಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಚಾಸಾ1 ರವರ ಮೇಲೆ ಹಲ್ಲೆ ಮಾಡಿ ನಮ್ಮ ಕೆಲಸಕ್ಕೆ ಅಡ್ಡಿ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾನು, ಚಾಸಾ3 ಮತ್ತು 4 ರವರು ಮತ್ತು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಬಂದ ರೋಗಿಗಳ ಕಡೆಯವರು ಜಗಳ ಬಿಡಿಸಿರುತ್ತೇವೆ ಎಂದರೆ ಸರಿಯಲ್ಲ. ನಂತರ ಗಲಾಟೆಯಾದ ಬಗ್ಗೆ ಚಾಸಾ1 ರವರು ಜಗಳೂರು ಪೋಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ನಾನು ಗಲಾಟೆಯನ್ನು ಪ್ರತ್ಯಕ್ಷವಾಗಿ ನೋಡಿರುತ್ತೇನೆ ಎಂದು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರಗಳು ತಿಳಿದಿದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ-ಆರೋಪಿ ಪರ ವಕೀಲರಿಂದಃ</u>** ಇರುವುದಿಲ್ಲ.

**<u>ಮರು ವಿಚಾರಣೆಃ</u> ಇರುವುದಿಲ್ಲ.**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿರುತ್ತಾರೆ.**)**

**ಓ ಹೇ ಕೇ ಸರಿ ಇದೆ**

**ಸಹಿ**

**ಪ್ರ.ದ.ನ್ಯಾ.ದಂ., ಜಗಳೂರು**